ನಡೆಯುತ್ತಾ-ನಡೆಯುತ್ತಾ ನಿಲ್ಲುತ್ತಾರೆ. ನೋವು ಸ್ವಲ್ಪ ಕಡಿಮೆಯಾಗುತ್ತದೆ. ಮತ್ತೆ ನಡೆಯಲು ಪ್ರಾರಂಭಿಸುತ್ತಾರೆ. ಆದರೆ ನಡೆದರೆ ನೋವು ಹೆಚ್ಚುತ್ತದೆ ಎಂದು ಅನ್ನಿಸುತ್ತದೆ. ತಮ್ಮ ಎದೆ ನೋವನ್ನು ಹೇಗೋ ಸಹಿಸಿಕೊಳ್ಳುತ್ತಾ ಮನೆಗೆ ಬರುತ್ತಾರೆ. ಮನೆಯ ಮೆಟ್ಟಿಲುಗಳಿಗೂ ಮೊದಲು ಎರಡೂ ಕಡೆ ಸ್ವಲ್ಪ ಖಾಲಿ ಜಾಗವಿದೆ. ಅದರ ನಡುವೆ ಮೆಟ್ಟಿಲುಗಳ ಮುಖ್ಯ ದ್ವಾರವಿದೆ. ಅದು ಈಗ ಮುಚ್ಚಿದೆ. ಬಳಿಯೇ ಡೋರ್-ಬೆಲ್ ಸ್ವಿಚ್ ಇದೆ. ದಾಸ್ ಬಾಬೂ ಹೇಗೋ ಮಾಡಿ ಸ್ವಿಚ್ ಒತ್ತುತ್ತಾರೆ. ನಂತರ ಅಲ್ಲಿ ಅವರಿಂದ ಒಂದು ಕ್ಷಣ ಸಹ ನಿಲ್ಲಲಾಗದೆ ಎಡಗಡೆಯ ಖಾಲಿ ಜಾಗದಲ್ಲಿ ಕೂರುತ್ತಾರೆ. ಎರಡೂ ಚೀಲಗಳನ್ನು ಅಲ್ಲಿಯೇ ಇಡುತ್ತಾರೆ.

ಡೋರ್-ಬೆಲ್ ಸದ್ದು ಕೇಳಿ ಮಗ ಬಾಗಿಲು ತೆರೆದು ಹೊರ ಬರುತ್ತಾನೆ. ಅಪ್ಪ ಆ ಚಿಕ್ಕ ಜಾಗದಲ್ಲಿ ಕೂತಿರುವುದನ್ನು ನೋಡಿ ಕೇಳುತ್ತಾನೆ, 'ಅಪ್ಪಾ, ಹೀಗೇಕೆ ಇಲ್ಲಿ ಕೂತಿದ್ದೀರ?'

ದಾಸ್ ಬಾಬೂ ಅವರಿಗೆ ಮಾತನಾಡಲು ಸಾಧ್ಯವಾಗುತ್ತಿಲ್ಲ. ಅವರು ಮೌನವಾಗಿರುತ್ತಾರೆ.

ಉತ್ತರ ಬರದಿದ್ದಾಗ ಮಗ ಕೇಳುತ್ತಾನೆ, 'ನನಗೆ ಶೇವಿಂಗ್ ಕ್ರೀಮ್ ತಂದ್ರಾ?'

ದಾಸ್ ಬಾಬೂ ಉತ್ತರಿಸದೆ ತಮ್ಮ ತಲೆಯಾಡಿಸಿ 'ಹೂಂ' ಎನ್ನುತ್ತಾರೆ.

ಮಗ ದೊಡ್ಡ ಚೀಲಕ್ಕೆ ಕೈ ಹಾಕಿ ಅದರೊಳಗೆ ಶೇವಿಂಗ್-ಕ್ರೀಮ್‌ಗಾಗಿ ತಡಕಾಡುತ್ತಾನೆ. ಶೇವಿಂಗ್ ಕ್ರೀಮ್ ಸಿಕ್ಕಿದ ನಂತರ ಅದನ್ನು ತೆಗೆದುಕೊಂಡು ಒಳಗೆ ಹೋಗುತ್ತಾನೆ. ಆದರೆ ಅವನು ಎರಡು ಚೀಲಗಳನ್ನು ಒಳಗೆ ಒಯ್ಯುವುದಿಲ್ಲ. ಸ್ವಲ್ಪ ಹೊತ್ತಿನ ನಂತರ ಸೊಸೆ ಬರುತ್ತಾಳೆ. ತನ್ನ ಮಾವ ಆ ಚಿಕ್ಕ ಜಾಗದಲ್ಲಿ ಕೂತಿರುವುದನ್ನು ನೋಡಿ ಹೇಳುತ್ತಾಳೆ, 'ಇಲ್ಲಿ ಹೀಗೇಕೆ ಕೂತಿದ್ದೀರ? ಒಳಗೆ ಬನ್ನಿ.'

ದಾಸ್ ಬಾಬೂ ಉತ್ತರಿಸದೆ ಮೌನ ವಹಿಸುತ್ತಾರೆ.

ಉತ್ತರ ಸಿಗದಿದ್ದಾಗ ಸೊಸೆ ಕೇಳುತ್ತಾಳೆ, 'ನನಗೆ ಶಾಂಪೂ ತಂದ್ರಾ?'

ದಾಸ್ ಬಾಬು ಉತ್ತರಿಸದೆ ತಲೆಯಾಡಿಸಿ, 'ಹೂಂ' ಎನ್ನುತ್ತಾರೆ.

ಸೊಸೆ ದೊಡ್ಡ ಚೀಲಕ್ಕೆ ಕೈ ಹಾಕಿ ಅದರೊಳಗಿನಿಂದ ಶಾಂಪೂ ಶೀಶವನ್ನು ತೆಗೆದುಕೊಳ್ಳುತ್ತಾಳೆ, ಸೋಪು ತೆಗೆದುಕೊಳ್ಳುತ್ತಾಳೆ. ನಂತರ ಅವುಗಳೊಂದಿಗೆ ಒಳಗೆ ಹೋಗುತ್ತಾಳೆ. ಆದರೆ ಅವಳು ಎರಡು ಚೀಲಗಳನ್ನು ಒಳಗೆ ಒಯ್ಯುವುದಿಲ್ಲ. ಚೀಲಗಳು ಅಲ್ಲಿಯೇ ಬಿದ್ದಿವೆ. ಸ್ವಲ್ಪ ಹೊತ್ತಿನ ನಂತರ ಮೊಮ್ಮಗ ಬರುತ್ತಾನೆ. ತನ್ನ ಅಜ್ಜ ಅಲ್ಲಿ ಕೂತಿರುವುದನ್ನು ನೋಡಿ ಹೇಳುತ್ತಾನೆ, 'ಅಜ್ಜಾ, ನೀವಿಲ್ಲಿ ಹೀಗೇಕೆ ಕೂತಿದ್ದೀರ? ಒಳಗೆ ಬನ್ನಿ.'

ದಾಸ್ ಬಾಬೂ ಉತ್ತರಿಸದೆ ಮೌನ ವಹಿಸುತ್ತಾರೆ.

ಮೊಮ್ಮಗ ಮತ್ತೆ ಕೇಳುತ್ತಾನೆ, 'ನನಗೆ ರೂಲಿನ ನೋಟ್‌ಬುಕ್ ತಂದ್ರಾ?'

ದಾಸ್ ಬಾಬೂ ಉತ್ತರಿಸದೆ ತಲೆಯಾಡಿಸಿ 'ಹೂಂ' ಎನ್ನುತ್ತಾರೆ.

'ಪೆನ್ಸಿಲ್?'

ದಾಸ್ ಬಾಬೂ ಮತ್ತೆ ತಲೆಯಾಡಿಸಿ 'ಹೂಂ' ಎನ್ನುತ್ತಾರೆ.

'ಚಿಪ್ಸ್?'

ದಾಸ್ ಬಾಬೂ ಈಗಲೂ ತಲೆಯಾಡಿಸಿ 'ಹೂಂ' ಎನ್ನುತ್ತಾರೆ.

ಮೊಮ್ಮಗ ಚೀಲದಿಂದ ತನ್ನ ಪೆನ್ಸಿಲ್ ತೆಗೆದುಕೊಳ್ಳುತ್ತಾನೆ; ಅದನ್ನು ಹಿಡಿದು ಒಳಗೆ ಹೋಗುತ್ತಾನೆ. ಆದರೆ ಎರಡೂ ಚೀಲಗಳು ಅಲ್ಲಿಯೇ ಬಿದ್ದಿರುತ್ತವೆ.

ಸ್ವಲ್ಪ ಹೊತ್ತಿನ ನಂತರ ಮೊಮ್ಮಗಳು ಬರುತ್ತಾಳೆ. ಅಜ್ಜ ಹೀಗೆ ಕೂತಿರುವುದನ್ನು ನೋಡಿ ಕೇಳುತ್ತಾಳೆ, 'ಅಜ್ಜಾ, ನೀವಿಲ್ಲಿ ಹೀಗೇಕೆ ಕೂತಿದ್ದೀರ? ಮನೆಯೊಳಗೆ ಬರಲ್ವಾ?' ದಾಸ್ ಬಾಬೂ ಉತ್ತರಿಸದೆ ಮೌನವಹಿಸುತ್ತಾರೆ.

ಮೊಮ್ಮಗಳು ಕೇಳುತ್ತಾಳೆ, 'ನನಗೆ ಆಲೂ ಚಿಪ್ಸ್ ತಂದ್ರಾ?'

ದಾಸ್ ಬಾಬೂ ಮತ್ತೆ ಹಿಂದಿನಂತೆಯೇ ತಲೆಯಾಡಿಸಿ 'ಹೂಂ' ಎನ್ನುತ್ತಾರೆ.

ಮೊಮ್ಮಗಳು ದೊಡ್ಡ ಚೀಲದೊಳಗೆ ಕೈ ಹಾಕಿ ಚಿಪ್ಸ್ ಪ್ಯಾಕೇಟ್ ತೆಗೆದುಕೊಂಡು ಮನೆಯ ಒಳಗೆ ಹೋಗುತ್ತಾಳೆ. ಆದರೆ ಅವಳು ಆ ಎರಡು ಚೀಲಗಳನ್ನು ಒಳಗೆ ಒಯ್ಯುವುದಿಲ್ಲ. ಅವು ಅಲ್ಲಿಯೇ ಬಿದ್ದಿರುತ್ತವೆ.

ಸ್ವಲ್ಪ ಹೊತ್ತಿನ ನಂತರ ದಾಸ್ ಬಾಬೂ ಅವರ ಹೆಂಡತಿ ಬರುತ್ತಾಳೆ. ಅಲ್ಲಿ ತನ್ನ ಪತಿ ಹಾಗೆ